# ಕರಕುಶಲ ಸೂಚನೆಗಳು

ನಂಬಿಕೆಯ ವೀರರು, ಹಂತ 3

## ವೇಲ್





### ಸಾಮಗ್ರಿಗಳು

- ವಿಧಾನ
- ಮಾರ್ಕರ್/ಪೆನ್
- ಕತ್ತರಿ
- ಬಣ್ಣಗಳು



### ಸೂಚನೆಗಳು

1. ವೇಲ್ ವಿಧಾನಗಳನ್ನು ಕತ್ತರಿಸಿರಿ ಮತ್ತು ಅವುಗಳಿಗೆ ಬಣ್ಣ ಹಚ್ಚಿರಿ.
2. ಪೀಸ್ 1 ರ ಬಾಲವನ್ನು, ಪೀಸ್ 2 ರ ಬಾಲದ ಮೇಲೆ ಅಂಟಿಸಿರಿ. ಅದು ಒಣಗಿದ ಮೇಲೆ, ಅಡ್ಡಗೆರೆಯಿರುವ ಸಾಲಿಗೆ ಅನುಸಾರವಾಗಿ ಅದನ್ನು ಪೀಸ್ 2 ರ ಕೊನೆಯಲ್ಲಿ ಅಂಟಿಸಿರಿ. ಪೀಸ್ 1 ರ ಕೊನೆಯನ್ನು, ಪೀಸ್ 2 ರ ಮಡಚಿರುವ ಭಾಗಕ್ಕೆ ಅಂಟಿಸಿರಿ ಆಗ ವೇಲ್ ಗೆ ಉಬ್ಬಿದ ರೂಪ ಬರುತ್ತದೆ.
3. ಪೀಸ್ 3 ಬಾಯಿ ಆಗಿದೆ. ಹಲ್ಲುಗಳನ್ನು ಬರೆಯಿರಿ ಮತ್ತು ಅದನ್ನು ವೇಲ್ ಮುಂಭಾಗಕ್ಕೆ ಅಂಟಿಸಿರಿ. ಕಣ್ಣುಗಳನ್ನು ಬಾಯಿಯ ಮೇಲೆ ಅಂಟಿಸಿರಿ ಮತು ಕಣ್ಣುಗಳೊಳಗೆ ಗುಡ್ಡೆಯನ್ನು ಬರೆಯಿರಿ.
4. ಪೀಸ್ 5 ರಲ್ಲಿ, ಎಲ್ಲಾ ಸಾಲುಗಳನ್ನು ಒಂದು ಕಡೆ ಕತ್ತರಿಸಿರಿ. ಮುಗಿದ ನಂತರ, ಪೇಪರ್ ಸುತ್ತಿರಿ ಮತ್ತು ವೇಲ್ ಮೇಲ್ಭಾಗದಲ್ಲಿ ಅಂಟಿಸಿರಿ.
5. ಕರಕುಶಲವನ್ನು ಮುಗಿಸಲು, ಬಾಲದ ಮೇಲೆ ಕೆಲವು ಗೆರೆಗಳನ್ನು ಎಳೆಯಿರಿ.

## ನಾಮಾನನು ನೀರಿನೊಳಗೆ





### ಸಾಮಗ್ರಿಗಳು

- ಬ್ಲೂ ಫೋಮ್ ಅಥವಾ ಬಿಳಿ ಅಥವಾ ಬಣ್ಣದ ಹಾಳೆ
- ಮರದ ಪಾಪ್ ಸಿಕಲ್ ಕಡ್ಡಿ
- ಕುಷ್ಠರೋಗವಿರುವ ಮತ್ತು ಇಲ್ಲದಿರುವ ನಾಮಾನನ ಚಿತ್ರ
- ಬಣ್ಣಗಳು
- ಕತ್ತರಿ
- ಗ್ಲೂ

### ಸೂಚನೆಗಳು

1. ಚೂರುಗಳನ್ನು ಕತ್ತರಿಸಿರಿ: ಒಂದೊಂದು ಮಗುವಿಗೆ 3 ಅಲೆಗಳು ಮತ್ತು 2 ನಾಮಾನನ ಚಿತ್ರಗಳು, ಒಂದು ಕುಷ್ಠರೋಗ ಇರುವದು, ಇನ್ನೊಂದು ಇಲ್ಲದೆ ಇರುವದು.
2. ಒಂದುವೇಳೆ ಅಲೆಗಳು ಬಿಳಿಯಾಗಿದ್ದರೆ, ನೀರಿನಂತೆ ಕಾಣಲು ಅವುಗಳಿಗೆ ಬಣ್ಣ ಹಚ್ಚಿರಿ. ಅಲೆಗಳಿಗೆ ಒಟ್ಟಾಗಿ ಗ್ಲೂ ಅಂಟಿಸಿರಿ. ಒಂದು ಹಾಳೆಯ ಮೇಲಿರುವ ಅಲೆಗಳ ಮೇಲೆ ಗ್ಲೂ ಹಾಕಿರಿ ಮತ್ತು 3 ಅಲೆಗಳು ಒಟ್ಟಾಗಿ ಸೇರುವ ತನಕ ಮತ್ತೊಂದು ಅಲೆಯ ನೇರವಾದ ಕೊನೆಗೆ ಅದನ್ನು ಅಂಟಿಸಿರಿ. ಅವುಗಳನ್ನು ಒಣಗಲು ಬಿಡಿರಿ.
3. ಅದು ಒಣಗಿದ ಮೇಲೆ, ಟ್ಯೂಬ್ ಆಕಾರ ಬರಲು ಎರಡೂ ಕಡೆಗಳಿಗೆ ಗ್ಲೂ ಹಾಕಿರಿ.
4. ನಾಮಾನನ ಎರಡೂ ಚಿತ್ರಗಳಿಗೆ ಬಣ್ಣ ಹಚ್ಚಿರಿ. ನಾಮಾನನ ಒಂದು ಮುಖವನ್ನು ಟೇಬಲ್ ಮೇಲೆ ಇಡಿರಿ ಮತ್ತು ಅದನ್ನು ಕಡ್ಡಿಗೆ ಗ್ಲೂ ಹಾಕಿ ಅಂಟಿಸಿರಿ. ನಂತರ ನಾಮಾನನ ಇನ್ನೊಂದು ಚಿತ್ರವನ್ನು ತೆಗೆದುಕೊಳ್ಳಿರಿ ಅದನ್ನು ಕಡ್ಡಿಯ ಮೇಲೆ ಅಂಟಿಸಿರಿ ಆಗ ಅದು ಮೊದಲದರೊಂದಿಗೆ ಹೊಂದಿಕೊಳ್ಳುತ್ತದೆ.
5. ಕರಕುಶಲದೊಂದಿಗೆ ಆಡಬೇಕಾದರೆ, ನಾಮಾನನು ನೀರಿನ ಮೇಲೆ ಇರುವ ಹಾಗೆ ಕಡ್ಡಿಯನ್ನು ಅಲೆಯ ಟ್ಯೂಬ್ ಒಳಗೆ ಹಿಡಿಯಿರಿ. ಮೊದಲು ಅವನು ಕುಷ್ಠರೋಗದೊಂದಿಗೆ ಪ್ರಾರಂಭಿಸುತ್ತಾನೆ, ನಂತರ ಏಳು ಸಾರಿ ನೀರಿನೊಳಗೆ ಮುಳುಗಿದ ನಂತರ ಅವನು ಶುದ್ಧನಾಗುತ್ತಾನೆ!

## ಲಯನ್ ಬುಕ್ ಮಾರ್ಕ್

### ಸಾಮಗ್ರಿಗಳು

- ಕತ್ತರಿಸಲು ಅನುಕೂಲವಾಗುವ ಗೆರೆಗಳಿರುವ ಹಾಳೆಯ ವೃತ್ತ
- 2 ಸಣ್ಣ ವಿಗ್ಲಿ ಕಣ್ಣುಗಳು
- ಪ್ಲಾಸ್ಟಿಕ್ ಸ್ಪೂನ್ ಅಥವಾ ಪಾಪ್ ಸಿಕಲ್ ಕಡ್ಡಿ
- ಮಾರ್ಕರ್/ಪೆನ್
- ಗ್ಲೂ
- ಬಣ್ಣಗಳು



### ಸೂಚನೆಗಳು

1. ವೃತ್ತಕ್ಕೆ ಬಣ್ಣ ಹಚ್ಚಿರಿ ಮತ್ತು ಸ್ಪೂನ್ ಅಥವಾ ಕಡ್ಡಿ ಒಳಗೆ ಹೋಗುವ ಸಲುವಾಗಿ ವೃತ್ತದೊಳಗಿರುವ ಗೆರೆಯನ್ನು ಕತ್ತರಿಸಿರಿ. ಫ್ರಿಂಜ್ ನಿರ್ಮಿಸಲು ಮೂಲೆಯಲ್ಲಿರುವ ಗೆರೆಗಳ ಪ್ರಕಾರ ಕತ್ತರಿಸಿರಿ.
2. ಮಧ್ಯದಲ್ಲಿ ಸ್ಪೂನ್ ಅಥವಾ ಕಡ್ಡಿಯನ್ನು ಇಟ್ಟು ಗ್ಲೂ ಹಾಕಿರಿ.
3. ಕಣ್ಣುಗಳನ್ನು ಗ್ಲೂ ಹಾಕಿ ಅಂಟಿಸಿರಿ ಮತ್ತು ಮಾರ್ಕರ್ ನಿಂದ ಮೂಗು ಹಾಗೂ ಬಾಯಿ ಬರೆಯಿರಿ. ನೀವು ವಿಗ್ಲಿ ಕಣ್ಣುಗಳನ್ನು ಉಪಯೋಗಿಸುವ ಬದಲು ಕಣ್ಣುಗಳ ಚಿತ್ರವನ್ನು ಬರೆಯಬಹುದು.
4. ನಿಮ್ಮ ಬುಕ್ ಮಾರ್ಕ್ ಸಿದ್ಧವಾಗಿದೆ!